ದಿನಾಂಕಃ **02.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಆರ್.ಆರ್. ವಕೀಲರಿಂದಃ

**17.** ದಿಃ24.12.2020 ರಂದು 4 ನೇ ಪ್ರತಿವಾದಿ ಹೊಸಕೆರೆ ಗ್ರಾಮದ ಆಸ್ತಿ ನಂ.255/1 ರಲ್ಲಿನ ಮನೆ ಮತ್ತು ನಿವೇಶನ, ಹೊಸಕೆರೆ ಗ್ರಾಮದ ಸರ್ವೆ ನಂ. 7/8 ರಲ್ಲಿ 18 ಗುಂಟೆ ಜಮೀನು, ಹೊಸಕೆರೆ ಗ್ರಾಮದ ನಿವೇಶನ ಸಂಖ್ಯೆ 762/7 ಕ್ಕೆ ಸಂಬಂಧಿಸಿದಂತೆ ನನ್ನ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . 1 ನೇ ಪ್ರತಿವಾದಿಯ ತಾಯಿ ಗಂಗಮ್ಮ ಖಾತೆ ನಂ. 259 ಕ್ಕೆ ಸಂಬಂಧಿಸಿದಂತೆ ದಿನಾಂಕ 21.11.2003 ರಂದು ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯಾದ 1 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ಸದರಿ ದಾನ ಪತ್ರ ವನ್ನು ಮಾಡಿಸಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿಯನ್ನು ದಿಃ08.08.2021 ರಂದು ನಾನು ಜಗದೀಶ್ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯಾದ 1 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

**18.** ಹೊಸಕೆರೆ ಗ್ರಾಮದ ಖಾತೆ ನಂ. 540 ಮತ್ತು ಖಾತೆ ನಂ. 1028/440 ರಂತೆ ನನ್ನ ಹೆಸರಿನಲ್ಲಿ ನನಗೆ ಸೇರಿದ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯಾದ 1 ನೇ ಪ್ರತಿವಾದಿಯು ಸದರಿ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಸಿರುತ್ತಾರೆ ಎಂದು ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿಗಳಲ್ಲಿ ಆಸ್ತಿ ಖಾತೆ ನಂ. 540 ನ್ನು ದಿಃ21.02.2011 ರಂದು ನಾನು ಅಲ್ಲಾ ಬಕಾಶ್ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯಾದ 1 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಮಾರಾಟದಿಂದ ಬಂದ

ಹಣದಿಂದ ನಾನು ನನ್ನ ಅತ್ತೆಯಾದ ರಾಜೇಶ್ವರಿರವರ ಹೆಸರಿನಲ್ಲಿ ದಿಃ03.12.2012 ರಂದು ಲಿಂಗೇನಹಳ್ಳಿಯಲ್ಲಿ ನಿವೇಶನ ಖರೀದಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮನೆಯ ಮೇಲೆ ಮನೆ ಕಟ್ಟುವ ವಿಚಾರವಾಗಿ ಸದರಿ ಹಣ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಆಸ್ತಿ ಖಾತೆ ನಂ. 540 ನ್ನು ಮಾರಾಟ ಮಾಡಿದ ಹಣದಿಂದ ಲಿಂಗೇನಹಳ್ಳಿಯಲ್ಲಿ ನಿವೇಶನವನ್ನು ನನ್ನ ಅತ್ತೆಯ ಹೆಸರಿನಲ್ಲಿ ಖರೀದಿ ಮಾಡಿದ ಕಾರಣ ಪುನಃ ಸದರಿ ಆಸ್ತಿಯನ್ನು ನನ್ನ ಹೆಂಡತಿಯಾದ ರೇಖಾರವರ ಹೆಸರಿಗೆ ದಾನ ಪತ್ರ ಮಾಡಿಸಿಕೊಂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ . ಸಾಕ್ಷಿಯು ಮುಂದುವರೆದು ಸದರಿ ಸ್ವತ್ತು ನನ್ನ ಅತ್ತೆಯ ಸ್ವಯಾರ್ಜಿತ ಆಸ್ತಿಯಾದ ಕಾರಣ ಮಗಳಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ . ರಾಜೇಶ್ವರಿರವರಿಗೆ ಆಸ್ತಿ ಖರೀದಿ ಮಾಡಲು ಯಾವುದೇ ಆದಾಯ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**19.** 1 ನೇ ಪ್ರತಿವಾದಿ ದಿನಾಂಕ 11.12.2014 ರಂದು ದಾವಾ 3 ಮತ್ತು 6 ನೇ ಆಸ್ತಿಗಳನ್ನು 3 ನೇ ಪ್ರತಿವಾದಿಗೆ ದಾನದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟು 3 ಆಸ್ತಿಗಳನ್ನು ನೀಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ 3 ಆಸ್ತಿಗಳು 3 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿರುತ್ತವೆ ಎಂದರೆ ಸರಿ. ಸದರಿ 3 ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**20.** 4 ನೇ ಪ್ರತಿವಾದಿ ನನ್ನ ಹೆಸರಿಗೆ ದಾನ ಬರೆದುಕೊಟ್ಟಂತಹ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾನ ಬರೆದುಕೊಟ್ಟ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆಸ್ತಿಗಳು ಎಂದು ಉತ್ತರಿಸಿರುತ್ತಾರೆ.

**21.** ನನ್ನ ತಾತನಿಂದ ನನ್ನ ತಂದೆಗೆ ಯಾವುದೇ ಆಸ್ತಿಗಳು ಬಂದಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿ, 4 ನೇ ಪ್ರತಿವಾದಿ ಮತ್ತು ಗಂಗಮ್ಮನವರ ಸ್ವಯಾರ್ಜಿತ ಆಸ್ತಿಗಳು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಆಸ್ತಿಗಳು ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿ, 4 ನೇ ಪ್ರತಿವಾದಿ ಮತ್ತು ಗಂಗಮ್ಮನವರ ಸ್ವಯಾರ್ಜಿತ ಆಸ್ತಿಗಳಾಗಿದ್ದರಿಂದ ಅವರು ದಾನ ಪತ್ರದ ಮೂಲಕ ಆಸ್ತಿಗಳನ್ನು ವಿಲೇವಾರಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**22.** ನನ್ನ ಹೆಸರಿಗೆ ಮತ್ತು 3 ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರಗಳು ಆದಂತಹ ಸ್ವತ್ತುಗಳಲ್ಲಿ ಸದರಿ ದಿನದಿಂದ ನಾವು ಪ್ರತ್ಯೇಕವಾಗಿ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳಾಗದೇ ಇರುವುದರಿಂದ ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ